ಅ) ಈ ಮನೆಗಳಿಗೆ ಸರ್ಕಾರದಿಂದ ಹಣ ಇನ್ನೂ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 1985-86ರ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಲ್ಲಿ ಮನೆಗಳು ಮಂಜೂರಾಗಿರುವುದಿಲ್ಲ. 1986-87ರಲ್ಲಿ 575 ಮನೆಗಳು ಮಂಜೂರಾಗಿರುತ್ತದೆ.

ಆ) ಮಂಜೂರಾಗಿರುವ 575 ಮನೆಗಳಿಗೆ ಒಟ್ಟು ರೂ.25.87 ಲಕ್ಷಗಳಷ್ಟು ಬಿಡುಗಡೆ ಮಾಡಲಾಗಿದೆ.

ಹಸಿರು ಕಾರ್ಡುಗಳ ವಿತರಣೆಯಲ್ಲಿ ಲೋಪದೋಷ

674 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಹಸಿರು ಕಾರ್ಡು ವಿತರಣೆಯಲ್ಲಿ ಲೋಪದೋಷಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2. ಹಾಗಿದ್ದಲ್ಲಿ ಅದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು?
3. ಈ ಹಿಂದೆ ಆಹಾರ ಸಚಿವರು ಹಸಿರು ಕಾರ್ಡನ್ನು ವಾಪಸ್ಸು ಪಡೆದು ಬೇರೆ ಕಾರ್ಡನ್ನು ನ್ಯಾಯಯುತವಾಗಿ ಹಂಚುತ್ತೇವೆಂದು ಹೇಳಿದ್ದು ನಿಜವಲ್ಲವೆ?
4. ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಟಿ.ಎನ್.ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

1. ಬಂದಿರುತ್ತದೆ.

2. ಹೊಸ ಹಸಿರು ಕಾರ್ಡು ಹಂಚುವ ಬಗ್ಗೆ ಮರು ಪರಿವೀಕ್ಷಣೆಯ ಕಾರ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

3. ಇಲ್ಲ.

4. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಹಾಲಿನ ಕೇಂದ್ರವನ್ನು ಚಿಕ್ಕಮಗಳೂರಿನಲ್ಲಿ ತೆರೆಯುವ ಬಗ್ಗೆ

77 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳಲ್ಲೂ ಕೆ.ಎಂ.ಎಫ್.ನವರು ಹಾಲಿನ ಡೈರಿ ಘಟಕ ತೆಗೆದಿರುತ್ತಾರೆಯೇ?

ಆ) ಇನ್ನು ಎಷ್ಟು ಜಿಲ್ಲೆಗಳಲ್ಲಿ ಸರ್ಕಾರ ಹಾಲಿನ ಡೈರಿ ತೆಗೆಯಲು ಉದ್ದೇಶಿಸಿದೆ?

ಇ) ಚಿಕ್ಕಮಗಳೂರು ಜಿಲ್ಲೆಗೆ ಹಾಲಿನ ಡೈರಿ ಅಗತ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು):

ಅ) ಇಲ್ಲ.

ಅ) ಹಾಲಿನ ಉತ್ಪಾದನೆ ಹಾಗೂ ಬೇಡಿಕೆಗಳನ್ವಯ ಹಾಗೂ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಸಹಮತಿಯೊಂದಿಗೆ ಆಧ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲು ಪ್ರಯತ್ನಿಸಲಾಗುವುದು.

ಇ) ಈಗಾಗಲೇ ಬೀರೂರಿನಲ್ಲಿ ಹಾಲು ಶೀಥಲೀಕರಣ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ.

ವ್ಯವಸಾಯಕ್ಕಾಗಿ ಮಾಡಿದ ಸಾಲದ ಮೇಲಿನ ಬಡ್ಡಿಯ ವಜಾ

422 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಲ್ಲಾ ತರಹ ಸಹಕಾರ ಸಂಸ್ಥೆಗಳಲ್ಲಿ ವ್ಯವಸಾಯಕ್ಕಾಗಿ ಮಾಡಿದ್ದ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಯಾವಾಗ ವಜಾ ಮಾಡಲಾಯಿತು?

ಆ) ಆಲ್ಲಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ವಜಾ ಆದ ಬಡ್ಡಿ ಸುಸ್ತಿ ಬಡ್ಡಿ ಎಷ್ಟು? ಹಾಗೂ ವಜಾ ಆದ ಹಣದಲ್ಲಿ ಸಂಬಂಧ ಪಟ್ಟ ಸಹಕಾರ ಸಂಸ್ಥೆಗಳಿಗೆ ಸರ್ಕಾರ ಕೊಟ್ಟಿರುವ ಹಣ ಎಷ್ಟು?

ಇ) ಈ ಹಣವನ್ನು ಸಹಕಾರ ಪೂರ್ತಿಯಾಗಿ ಸಂಬಂಧಪಟ್ಟ ಸಂಸ್ಥೆಗಳಿಗೆ ಪಾವತಿ ಮಾಡದಿರುವುದರಿಂದ ರೈತ ಸಾಲ ತೀರುವಳಿ ಪತ್ರ ಆಪೇಕ್ಷಿಸಿದಾಗ ಬಾಕಿ ಎಂದು ನಮೂದಿಸುತ್ತಿರುವುದು ನಿಜವೇ? ಹಾಗೂ ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೇ? (ಪ್ರತಿವರ್ಷದ ವಿವರಗಳನ್ನು ಕೊಡುವುದು)

ಈ) ಹಾಗಿದ್ದಲ್ಲಿ ಬಾಕಿ ಇರುವ ಹಣವನ್ನು ಎಂದು ಚುಕ್ತಾ ಮಾಡಲಾಗುವುದು.

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು)

ಅ) ವ್ಯವಸಾಯಕ್ಕಾಗಿ ಸಹಕಾರ ಸಂಸ್ಥೆಗಳಲ್ಲಿ ರೈತ ಸದಸ್ಯರು ಮಾಡಿದ್ದ ಸಾಲದ ಮೇಲಿನ ಬಡ್ಡಿಯನ್ನು ಸಹಾಯಧನವಾಗಿ ಭರಿಸಿ ಕೊಡುವ ಯೋಜನೆಯನ್ನು ಸರ್ಕಾರವು 1982-83ನೇ ಸಾಲಿನಿಂದ 1988-89ನೇ ಸಾಲಿನವರೆಗೂ ಜಾರಿಗೆ ತಂದಿದ್ದಿತು. ಸುಸ್ತಿ ಬಡ್ಡಿಯನ್ನು ವಜಾ ಮಾಡಲಾಗಿರುವುದಿಲ್ಲ.

ಆ) ವಜಾ ಆದ ಬಡ್ಡಿ- ರೂ. 17047-87 ಲಕ್ಷ

ವಜಾ ಆದ ಸುಸ್ತಿ ಬಡ್ಡಿ - ಇಲ್ಲ.

ರೂ. 16518.23 ಲಕ್ಷ ಸಂಬಂಧಪಟ್ಟ ಸಹಕಾರ ಸಂಸ್ಥೆಗಳಿಗೆ ಬಿಡುಗಡೆ ಮಾಡಿದೆ.

ಇ) ನಿಜ, ಇದನ್ನು ಗಮನಿಸಿ ಇಂತಹ ಸಂದರ್ಭಗಳಲ್ಲಿ ರೈತ ಸದಸ್ಯರು ಆಪೇಕ್ಷಿಸಿದಾಗ ಸಾಲ ತೀರುವಳಿ ಪತ್ರಗಳನ್ನು ನೀಡುವಂತೆ ಎಲ್ಲಾ ಸಹಕಾರ ಸಂಘಗಳಿಗೆ ತಿಳುವಳಿಕೆ ನೀಡಲು ಇಲಾಖಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಬಡ್ಡಿ ಸಹಾಯ ಧನ ಬಿಡುಗಡೆ ಮಾಡಬೇಕಾಗಿದ್ದ ಹಾಗೂ ಬಿಡುಗಡೆ ಮಾಡಲಾಗಿರುವ ವರ್ಷವಾರಿ ವಿವರಗಳು ಈ ರೀತಿ ಇರುತ್ತದೆ.

ಕ್ರಮ ಸಂಖ್ಯೆ	ವರ್ಷ	ಬಡ್ಡಿ ಸಹಾಯ ಧನ ಮಂಜೂರು ಮಾಡಿರುವುದು	ಬಡ್ಡಿ ಸಹಾಯ ಧನ ಬಿಡುಗಡೆ ಮಾಡಿರುವುದು	ಬಡ್ಡಿ ಸಹಾಯ ಧನ ಬಿಡುಗಡೆ ಮಾಡಬೇಕಾ ಗಿರುವುದು
1.	19982-83	3313.15	3313.15	-
2.	1983-84	1536.97	1536.97	-
3.	1984-85	466.49	466.49	-